**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.1007/2019**

ದಿನಾಂಕ ೦ಃ06.06.2026

| | | |
|---|---|---|
| ಹೆಸರು | ಃಬಸವರಾಜಪ್ಪ ಹೆಚ್ ಜೆ., | ಸಿಡಬ್ಲ್ಯೂ – 09 |
| ತಂದೆ ಹೆಸರು | ಃಜಡೆ ಸಿದ್ದಪ್ಪ | ಪಿ ಡಬ್ಲ್ಯೂ– 05 |
| ವಯಸ್ಸು | ಃ60 ವರ್ಷ | |
| ಉದ್ಯೋಗ | ಃನೇತ್ರ  ತಜ್ಞರು | |
| ವಾಸಸ್ಥಳ | ಃಕಡೂರು | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ ೦ಃ ಮಾನ್ಯ ಎ.ಪಿ.ಪಿ. ರವರಿಂದಃ**

ಅಕ್ಟೋಬರ್ 2018 ರಿಂದ ಸೆಪ್ಟಂಬರ್ 2019 ರವರೆಗೆ  ಚಳ್ಳಕೆರೆ ಸರ್ಕಾರಿ  ಆಸ್ಪತ್ರೆಯಲ್ಲಿ ನೇತ್ರ ತಜ್ಞರಾಗಿ  ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.06.2019 ರಂದು ಸಂಜೆ 05–45 ಗಂಟೆಗೆ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ, ದಿನಾಂಕ 26.06.2019 ರಂದು ಬೆಳಿಗ್ಗೆ 08.00 ರ ಸಮಯದಲ್ಲಿ ನಡೆದ  ಹೊಡೆದಾಟದ ವಿಚಾರವಾಗಿ ಬಂದಿರುತ್ತಾರೆ.

ಚಾಸಾ–1 ರವರನ್ನು ಪರಿಕ್ಷೀಸಲಾಗಿ

1) ಎಡ ಬುಜದ ಮೇಲೆ ನೋವು,

2) ಎದೆಯ ಭಾಗದ ಮೇಲೆ  ನೋವು ಕಂಡು ಬಂದಿರುತ್ತದೆ.

ಚಾಸಾ–1 ರವರರನ್ನು ಎಕ್ಸ್ ರೇ ಮಾಡಿದಾಗ ಎಡ ಬುಜದ ಮೂಳೆಯು ಮುರಿದಿರುವುದು ಕಂಡು ಬಂದಿರುತ್ತವೆ. ಹೆಚ್ಚಿನ ಚಿಕಿತ್ಸೆಗಾಗಿ ಮೂಳೆ ವೈದ್ಯರಿಗೆ ತೋರಿಸಲು ತಿಳಿಸಿರುತ್ತೇನೆ.

ಈ ಮೇಲಿನ ಗಾಯಗಳು ನನ್ನ ಅಭಿಪ್ರಾಯದಲ್ಲಿ ತೀವ್ರ  ಸ್ವರೂಪದ ಗಾಯಗಳಾಗಿರುತ್ತವೆ.

ಈ ಕುರಿತು ನಾನು ತನಿಖಾಧಿಕಾರಿಗಳಿಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ, ಸದರಿ ಗಾಯದ ಪ್ರಮಾಣ ಪತ್ರಗಳನ್ನು  ನಿ.ಪಿ.5 ಅಂತ , ಸಾಕ್ಷಿಯ ಸಹಿಗಳನ್ನು  ನಿಪಿಃ 5(ಎ)  ಅಂತ ಗುರುತಿಸಲಾಯಿತು. ಮೇಲಿನ ಗಾಯಗಳು ಕಬ್ಬಿಣದ ರಾಡಿನಿಂದ ಹೊಡೆದರೆ, ಜೋರಾಗಿ ಕೈಯಿಂದ ಹೊಡೆದರೆ ಹಾಗೂ ಬಿದ್ದರೆ ಆಗುವ ಸಾಧ್ಯತೆಗಳಿರುತ್ತವೆ.

**ಪಾಟೀ ಸವಾಲು ಃ ಶ್ರೀ ಕೆ.ಬಿ.ಪಿ., ಆರೋಪಿ ಪರ ವಕೀಲರಿಂದಃ**

ಚಿಕಿತ್ಸೆಗೆ ಚಾಸಾ-1 ರವರ ಜೊತೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಕಣ್ಣಿನ ವೈದ್ಯನಾಗಿರುವ ಕಾರಣ ಮೂಳೆ ಮುರಿದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎಂದರೆ, ಸಾಕ್ಷಿಯ ಎಕ್ಸ್ ರೇ ನೋಡಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ . ಎಕ್ಸ್ ರೇ ಯನ್ನು ಮಾರನೇ ದಿನ ಮಾಡಿಸಲಾಗಿರುತ್ತದೆ. ಚಾಸಾ-1 ರವರು ಚಿಕಿತ್ಸೆಗೆ ಬಂದಾಗ ಸದರಿಯವರಿಗೆ ಪ್ರಜ್ಞೆ ಇತ್ತು. ಚಾಸಾ-1 ರವರು ಒಳರೋಗಿಯಾಗಿ ಎಷ್ಟು ದಿನ ದಾಖಲಾಗಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಚಾಸಾ-1 ರವರಿಗೆ ಎಷ್ಟು ದಿನಗಳ ಕಾಲ ಚಿಕಿತ್ಸೆ ನೀಡಿರುತ್ತೇನೆ ಎಂದರೆ, ಸಾಕ್ಷಿಯು ನಾನು ನೀಡಿರುವುದಿಲ್ಲ ಮೂಳೆ ವೈದ್ಯರು ನೀಡಿರುತ್ತಾರೆ ಎಂದು ನುಡಿಯುತ್ತಾರೆ . ಮೂಳೆ ವೈದ್ಯರು ಕೇಸ್ ಶೀಟ್ ನಲ್ಲಿ ವರದಿ ನೀಡಿದ ಆಧಾರದ ಮೇಲೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಕೇಸ್ ಶೀಟ್ ವರದಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಚಾಸಾ-1 ರವರಿಗೆ ಚಿಕಿತ್ಸೆ ನೀಡಿ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಎದೆಯ ಮೇಲೆ ರಕ್ತ ಗಾಯವಾಗಿರುವುದಿಲ್ಲ. ಚಾಸಾ-1 ರವರು ಚಿಕಿತ್ಸೆಗೆ ಬಂದಾಗ ಅವರ ಮೈ ಮೇಲೆ ರಕ್ತ ಗಾಯಗಳು ಆಗಿರಲಿಲ್ಲ.

ನಿಪಿ.5 ರಲ್ಲಿ ಹೇಳಿರುವಂತಹ ಗಾಯಗಳು ಜಮೀನಿನ ಬದುವಿನಲ್ಲಿ ನಡೆದುಕೊಂಡು ಹೋಗುವಾಗ ಬಿದ್ದರೆ ಆಗುವ ಸಾಧ್ಯತೆ ಎಂದರೆ ಸರಿ. ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.